




## ಜೈಸಲ್ಮೇರ್‌ನ ಭವ್ಯ ಮಹಲು

'ಗೋಲ್ಡನ್ ಸಿಟಿ' ಎಂದೇ ಹೆಸರಾದ ಜೈಸಲ್ಮೇರ್ ರಾಜಸ್ಥಾನದ ಥಾರ್ ಮರುಭೂಮಿಯ ಅಂಚಿನಲ್ಲಿರುವ ಸುಂದರ ನಗರ. ಹಳದಿ ಬಣ್ಣದ ಮರಳುಗಲ್ಲುಗಳಿಂದ ನಿರ್ಮಾಣಗೊಂಡ ಇಲ್ಲಿನ ಜೈನಮಂದಿರಗಳು, ಕೋಟೆಗಳು, ಕಟ್ಟಡಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಅದರಲ್ಲೂ ಇಲ್ಲಿನ ಹವೇಲಿಗಳು ಜಗತ್ಪ್ರಸಿದ್ಧವಾಗಿವೆ. ಚಿತ್ರದಲ್ಲಿನ 'ಪಟ್ವಾನ್ ಕಿ ಹವೇಲಿ' ಅನ್ನು 1805ರಲ್ಲಿ ಗುಮನ್ ಚಂದ್ ಪಟ್ವ್ ಎಂಬ ವರ್ತಕ ಮೊದಲಿಗೆ ಕಟ್ಟಲಾರಂಭಿಸಿದನು. ಹವೇಲಿ ಎನ್ನುವುದು ಮೂಲತಃ ಅರೇಬಿಕ್ ಶಬ್ದವಾಗಿದ್ದು, 'portion' ಅಥವಾ 'private space' ಎನ್ನುವ ಅರ್ಥವಿದೆ. ತನ್ನ ಐವರು ಮಕ್ಕಳಿಗೆಂದು ಒಂದೇ ಬಾರಿ ಐದು ಮಹಲುಗಳನ್ನು ಒಂದರ ಪಕ್ಕದಲ್ಲೊಂದು ಕಟ್ಟಲಾರಂಭಿಸಿದನು. ಇದು ಪೂರ್ಣಗೊಳ್ಳಲು ತೆಗೆದುಕೊಂಡ ಕಾಲಾವಧಿ 55 ವರ್ಷಗಳು! ಇಂಡೋ ಇಸ್ಲಾಮಿಕ್ ಶೈಲಿಯ ಈ ಭವ್ಯ ಮಹಲುಗಳು ಸಂಕೀರ್ಣವಾದ ಕೆತ್ತನೆಗಳೊಂದಿಗೆ ಅತ್ಯದ್ಭುತ ವಿನ್ಯಾಸಗಳನ್ನು ಹೊಂದಿರುವ ಕಾರಣ ಪ್ರಸಿದ್ಧಿ ಪಡೆದಿವೆ. ಜೈಸಲ್ಮೇರಿಗೆ ಭೇಟಿ ನೀಡಿದಾಗ ಕಣ್ಮನ ಸೂರೆಗೊಳ್ಳುವ ಈ ಹವೇಲಿಯನ್ನು ತಪ್ಪದೆ ನೋಡಬೇಕು.

—ಕೆ.ಟಿ. ಜಯಶ್ರೀ, ಹಾಸನ






## ಹುಲಿಜೇಡದ ಗುಹೆ

ಪಶ್ಚಿಮಘಟ್ಟದ ಕಾಡಿನಲ್ಲಿ ಹೆಜ್ಜೆ ಇಟ್ಟಲ್ಲೆಲ್ಲಾ ಕಾಡು ಜೀವಿಗಳ ಆಶ್ರಯದ ಕುರುಹುಗಳು ಪತ್ತೆಯಾಗುತ್ತವೆ. ವನ್ಯ ಲೋಕದ ವಿಸ್ಮಯಗಳು, ನಮ್ಮ ಕುತೂಹಲಕ್ಕೆ ಕಾರಣವಾಗುತ್ತವೆ. ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ಕೊಡಸಳ್ಳಿ ಜಲಾಶಯ ತಲುಪುವ ರಸ್ತೆಯ ಪಕ್ಕದಲ್ಲಿ ಧರೆಗೆ ಹುಲಿಜೇಡವೊಂದು ಗೂಡು ಕಟ್ಟಿದ ಪರಿ ಅದ್ಭುತವಾಗಿದೆ.

ಒಳಭಾಗಕ್ಕೆ ಮೂರು ಅಡಿ ಆಳದ ರಂಧ್ರ ಕೊರೆದು ಆ ಜಾಗವನ್ನೇ ತನ್ನ ವಾಸಸ್ಥಾನ ಮಾಡಿಕೊಂಡಿದೆ ಹುಲಿಜೇಡ. ಹೊರಭಾಗದಲ್ಲಿ ಅಂಟು ದ್ರವ ಸುರಿಸಿದ ಹುಲಿಜೇಡವು ಬಿಳಿಯ ಬಲೆ ಹೆಣೆದು ಕ್ರಿಮಿಕೀಟಗಳನ್ನು ಆಹಾರಕ್ಕೆ ಒಗ್ಗಿಸಿಕೊಳ್ಳುವ ಈ ಉಪಾಯ ಮೆಚ್ಚುವಂತಹದ್ದು. ದಪ್ಪನೆಯ ಗಾತ್ರದ ಈ ಹುಲಿಜೇಡಗಳು ರಾತ್ರಿಯ ಹೊತ್ತು ಹೊರ ಬಂದು ತಮ್ಮ ಆಹಾರವನ್ನು ಬೇಟೆಯಾಡುತ್ತವೆ. ವಿಷಪೂರಿತವಾದ ಈ ಹುಲಿಜೇಡ ಕಚ್ಚಿದರೆ, ಕಡಿತ ಭಾಗದಲ್ಲಿ ಊತವಾಗಿ ವಾರಗಟ್ಟಲೆ ನೋವು ಕಾಡುತ್ತದೆ. ನೋವು ಶಮನವಾಗಲು ನಾಟಿ ಔಷಧಿಯೇ ಬೇಕು. ಕಾಡಿನ ನಡುವೆ ಸಾಗುವಾಗ ಇಂತಹ ವಿಷಜಂತುಗಳ ಬಗೆಗೆ ಎಚ್ಚರಿಸಬೇಕು.

—ದತ್ತಾತ್ರೇಯ ಭಟ್ಟ ಕಣ್ಣೆಪಾಲ, ಯಲ್ಲಾಪುರ